LEGISLATIVE ASSEMBLY.

SEVENTEENTH DAY.

Tuesday, 3rd April 1951.

The Legislative Assembly met in the Assembly Hall, Old Public Offices, Bangalore, at Eight Minutes past Eight of the Clock.

Mr. Speaker (The Hon'ble Sri V. Venkatappa) in the Chair.

STARRED QUESTIONS

(to which oral answers were given)

Promotions of I Division Clerks and Stenographers as Assistant Secretaries

* ಪ್ರಶ್ನೆ 42.—ಶ್ರೀ ಎಚ್. ಸಿದ್ದನಂಜಪ್ಪನವರು ಹಾನನ ಡಿಸ್ಟ್ರಿಕ್ಟ್).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರ ದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಸೆಕ್ರೆಟೇರಿಯಟ್ ಕಚೇರಿಗಳಲ್ಲಿ ಮೊದಲನೆಯ ಡಿವಿಜನ್ನಿನ ಗುಮಾಸ್ತರನ್ನಾಗಲಿ ಅಥವಾ ಶೀಘ್ರಲಿಪಿ ಬರಹಗಾರರನ್ನಾಗಲಿ ಸರ್ಕಾರದ ಅಸಿಸ್ಟೆಂಟ್ ಸೆಕ್ರೆಟರಿಗಳನ್ನಾಗಿ ಬಡ್ತಿಮಾಡಲಾದ ಸಂದರ್ಭಗಳಿವೆಯೇ; (ಇದ್ದ ಪಕ್ಷದಲ್ಲಿ, ಕಳೆದ 15 ವರ್ಷಗಳಿಗೆ ಸಂಬಂಧಪಡುವಂತೆ ತಪಶೀಲುಗಳನ್ನು ತಿಳಿಸಬೇಕೆಂದು ಪ್ರಾರ್ಥನೆ.)

(b) ಮೊದಲನೆಯ ಡಿವಿಜನ್ನಿಗೆ ಸೇರಿದ ಗುಮಾಸ್ತರ ದರ್ಜೆಯಿಂದ ಸೆಕ್ರೆಟೇರಿಯಟ್ ಸೂಪರಿಂಟೆಂಡೆಂಟರ ಮತ್ತು ಅಸಿಸ್ಟೆಂಟ್ ಸೆಕ್ರೆಟರಿಗಳ ದರ್ಜೆಗೆ ಬಡ್ತಿಗಳನ್ನು ಸೀನಿಯಾರಿಟಿ ಆಧಾರದ ಮೇಲೆ ಕೊಡಲಾಗುತ್ತಿದೆಯೇ ಅಥವಾ ಈ ರೀತಿ ಬಡ್ತಿಗಳನ್ನು ಮಾಡುವುದರಲ್ಲಿ ಉಮೇದುವಾರುಗಳ ವಿಶೇಷರೀತಿಯಾದ ಅರ್ಹತೆಗಳನ್ನೇನಾದರೂ ಪರ್ಯಾಲೋಚನೆಗೆ ತೆಗೆದುಕೊಂಡು ಆ ರೀತಿ ಬಡ್ತಿಗಳನ್ನು ಕೊಡಲಾಗುತ್ತಿದೆಯೇ?

ಉತ್ತರ.—ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು (ಹಣಕಾನು ಮತ್ತು ಕೈಗಾರಿಕಾ ಸಚಿವರು). [on behalf of ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿ ಯವರು (ಪ್ರಧಾನಸಚಿವರು)].—

(a) ನಾಲ್ಕು ಸಂದರ್ಭಗಳಲ್ಲಿ. ಮೊದಲನೆಯ ಡಿವಿಜನ್ನಿನ ಗುಮಾಸ್ತರುಗಳಿಗೆ ಸರ್ಕಾರದ ಅಸಿಸ್ಟೆಂಟ್ ಸೆಕ್ರೆಟರಿಗಳಾಗಿ ಬಡ್ತಿಕೊಡಲಾಗಿದೆ ಮತ್ತು ಒಂದು ಸಂದರ್ಭದಲ್ಲಿ ಒಬ್ಬರು ಶೀಘ್ರಲಿಪಿಗಾರರಿಗೆ ಅಸಿಸ್ಟೆಂಟ್ ಸೆಕ್ರೆಟರಿಗಳಾಗಿ ಬಡ್ತಿಕೊಡಲಾಗಿದೆ.

ಹೆಸರು		ಸರ್ವಿಸ್ಸಿಗೆ ಸೇರಿದ ತಾರೀಖು	ಅಸಿಸ್ಟೆಂಟ್ ಸೆಕ್ರೆಟರಿಯವರಾಗಿ ನೇಮಕಮಾಡಲ್ಪಟ್ಟ ತಾರೀಖು
Iನೆಯ ಡಿವಿಜನ್ನಿನ ಗುಮಾಸ್ತರುಗಳು.			
ಶ್ರೀಯುತರುಗಳಾದ—			
1 ಎಂ. ಕೆ. ವರದರಾಜರ್ಕರವರು	...	5—1—1932	16—8—1941
2 ಜಿ. ಎಸ್. ವೆಂಕಟರಮಣಐಯ್ಯರ್ ಅವರು	...	9—9—1938	31—3—1944
3 ಪಿ. ಹೊನ್ನಪ್ಪನವರು*	...	21—9—1930	29—4—1948
4 ಕೆ. ಎಂ. ರಾಮಕೃಷ್ಣಯ್ಯನವರು*	...	17—10—1930	19—11—1948
ಶೀಘ್ರಲಿಪಿಗಾರರು.			
1 ಶ್ರೀ ಎಸ್. ಜಿ. ನರಸಿಂಹಯ್ಯನವರು*	...	10—8—1917	6—1—1949

*ಈ ಮೂರು ಮಂದಿ ಆಫೀಸರುಗಳೂ, ಅಸಿಸ್ಟೆಂಟ್ ಸೆಕ್ರೆಟರಿಗಳಾಗಿ ನೇಮಕಮಾಡಲ್ಪಟ್ಟ ಕಾಲದಲ್ಲಿ ಬದಲೀ ತರೀಖು ಸೂಪರಿಂಟೆಂಡೆಂಟರುಗಳಾಗಿದ್ದರು.

(b) 'ಸೀನಿಯಾರಿಟಿ'ಯನ್ನೂ ಮತ್ತು ವಿಶೇಷ ರೀತಿಯ ಅರ್ಹತೆಯನ್ನೂ ಎರಡನ್ನೂ ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವುದು.

ಶ್ರೀ ಎಚ್. ಸಿದ್ದನಂಜಪ್ಪನವರು.—(a) ಪ್ರಶ್ನೆಗೆ ಉತ್ತರವಾಗಿ 1941ರಲ್ಲಿ ಒಬ್ಬರು ಫಸ್ಟ್ ಡಿವಿಜನ್ ಕ್ಲಾರ್ಕ್ ಆಗಿದ್ದವರು ಅಸಿಸ್ಟೆಂಟ್ ಸೆಕ್ರೆಟರಿಯಾಗಿದ್ದಾರೆಂದು ಹೇಳಿದೆ. ಆಗ ಅವರಿಗಿಂತ ಸೀನಿಯರ್ ಆಗಿದ್ದವರು ಯಾರಾದರೂ ಇದ್ದರೆ? ಹಾಗಿದ್ದರೆ ಎಷ್ಟುಜನ ಇದ್ದರು?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ನೋಟೀಸ್ ಬೇಕು.

ಶ್ರೀ ಎಚ್. ಸಿದ್ದನಂಜಪ್ಪನವರು.—1948ರಲ್ಲಿ ಇಬ್ಬರು ಫಸ್ಟ್ ಡಿವಿಜ್ ಕ್ಲಾರ್ಕ್‌ಗಳು ಮತ್ತು 1949 ರಲ್ಲಿ ಒಬ್ಬರು ಸ್ಪೆನೋಗ್ರಾಫರು ಅಕ್ಟಿಂಗ್ ಸೂಪರಿಂಟೆಂಡೆಂಟರಾಗಿದ್ದು ಅಸಿಸ್ಟೆಂಟ್ ಸೆಕ್ರೆಟರಿಗಳಾಗಿದ್ದಾರೆಂದು ಹೇಳಿದೆ. ಆಗ ಖಾಯಮಾಗಿ ಸೂಪರಿಂಟೆಂಡೆಂಟರಾಗಿದ್ದವರ ಪೈಕಿ ಯಾರಾದರೂ ಅಸಿಸ್ಟೆಂಟ್ ಸೆಕ್ರೆಟರಿಯಾಗಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆಗಿರಬಹುದು.

ಶ್ರೀ ಎಚ್. ಸಿದ್ದನಂಜಪ್ಪನವರು.—ಫಸ್ಟ್ ಡಿವಿಜ್ ಕ್ಲಾರ್ಕ್‌ಗಳನ್ನು ಅಸಿಸ್ಟೆಂಟ್ ಸೆಕ್ರೆಟರಿಗಳಾಗಿ ನೇಮಕ ಮಾಡಿರತಕ್ಕ ಅನೇಕ ನಂದರ್ಭಗಳಲ್ಲಿ ಜೂನಿಯರ್ ಆಗಿರುವವರನ್ನು ಸ್ಪೆಷಲ್ ಮೆರಿಟ್ ಮೇರೆ ನೇಮಕಮಾಡಿ, ಸೀನಿಯರ್ ಆಗಿದ್ದವರಿಗೆ ಆ ಅವಕಾಶ ಸಿಕ್ಕದೇ ಹೋಗಿರುವುದು ಗೊತ್ತೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರು ಸಾಮಾನ್ಯವಾಗಿ ಸೂಪರಿಂಟೆಂಡೆಂಟ್ ಆದ ಮೇಲೆ ಅಸಿಸ್ಟೆಂಟ್ ಸೆಕ್ರೆಟರಿಯಾಗಿ ನೇಮಕ ಮಾಡುತ್ತಾರೆ. Not as First Division clerks; first they become Superintendents and then they are appointed.

ಶ್ರೀ ಎಚ್. ಸಿದ್ದನಂಜಪ್ಪನವರು.—ಹಾಗಿದ್ದ ಮೇಲೆ ಸೂಪರಿಂಟೆಂಡೆಂಟ್ ಆಗಿ ನೇಮಕಮಾಡುವಾಗ ಜೂನಿಯರ್ ಆಗಿರುವವರನ್ನು ಸೀನಿಯರ್ ಆಗಿರುವವರ ಮೇರೆ special merit ಎಂದು ನೇಮಿಸಿ ನೇಮಕ ಮಾಡುವುದಿಲ್ಲವೇ ?

The Hon'ble Sri H. C. DASAPPA.— We have already answerd that question. Both seniority and special merit are taken into consideration. Generally seniority is respected; we do not interfere with seniority. But merit is also taken into consideration. Mere seniority will not count. There are cases where senior people are superseded because of merit.

Sri H. SIDDANANJAPPA.—Is it a recognised practice?

The Hon'ble Sri H. C. DASAPPA.— It is a recognised practice all over.

Transfers of certain Midwives in Chitaldurg District

*ಪ್ರಶ್ನೆ 66.—ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಡಿಸ್ಟ್ರಿಕ್ಟ್—ನಿಮ್ನ ಪಂಗಡ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಚಿತ್ರದುರ್ಗ ಡಿಸ್ಟ್ರಿಕ್ಟ್‌ನಲ್ಲಿರುವ ಹರಿಜನರ ಪಂಗಡಕ್ಕೆ ಸೇರಿದ ಸೂಲಗಿತ್ತಿಯರ (ಎಂದರೆ ಮಿಡ್ ವೈಫ್‌ಗಳ) ಒಟ್ಟು ಸಂಖ್ಯೆ ಎಷ್ಟು; ಅವರ ಹೆಸರುಗಳು, ಅವರ ಸರ್ವಿಸು ಮತ್ತು ಆಯಾ ಸ್ಥಳಗಳಲ್ಲಿ ಅವರು ಎಷ್ಟೆಷ್ಟು ಕಾಲದಿಂದ ಇದ್ದವರು— ಎಂಬ ಸಂಗತಿಗಳು;

(b) ಚಿತ್ರದುರ್ಗದಲ್ಲಿರುವ ಸೂಲಗಿತ್ತಿಯವರಾದ ಶ್ರೀಮತಿ ಅನುಸೂಯಮ್ಮನವರು ತಮ್ಮನ್ನು ವರ್ಗಾಯಿಸಿದ್ದ ಹೊಸ ಸ್ಥಳಕ್ಕೆ 48 ಘಂಟೆಗಳೊಳಗಾಗಿ ಹೋಗಿ ತಮ್ಮ ಕೆಲಸದ ಮೇರೆ ಹಾಜರಾಗಿರಬೇಕೆಂದು 1950ನೆಯ ಇಸವಿ ಡಿಸೆಂಬರ್ 6ನೆಯ ತಾರೀಖು ಅವರಿಗೆ ಕಟ್ಟಾಕಡೆಯ ಸ್ವಭಾವದ ಆಜ್ಞೆಯನ್ನು ಮಾಡಿ ಅವರನ್ನು ಆ ರೀತಿ ವರ್ಗಾಯಿಸಲು ಕಾರಣವೇನು ;

(c) 1950ನೆಯ ಇಸವಿ ಡಿಸೆಂಬರ್ 6ನೆಯ ತಾರೀಖಿನಿಂದ 1950ನೆಯ ಇಸವಿ ಡಿಸೆಂಬರ್ 16ನೆಯ ತಾರೀಖಿನ ಅವಧಿಯಲ್ಲಿ ಶ್ರೀಮತಿ ಪಿ. ಅನುಸೂಯಮ್ಮನವರ ವರ್ಗಾವಣೆಗೆ ಸಂಬಂಧಪಟ್ಟ ಹುಕುಮನ್ನು ಜಾರಿಗೆ ತರದೆ ಹಾಗೆಯೇ ಇಟ್ಟಿರತಕ್ಕುದೆಂದು ಸರ್ಕಾರದ ಸೀನಿಯರ್ ಸರ್ಜನರವರು ಯಾವ ಹುಕುಮನ್ನಾದರೂ ಸಾದರುಮಾಡಿದರೇ; ಆ ರೀತಿ ಮಾಡಿದ್ದ ಪಕ್ಷದಲ್ಲಿ ಅವರ ಹುಕುಮಿನ ನಕಲೊಂದನ್ನು ಈ ಸಭೆಯ ಮುಂದೆ ಇಡಲಾಗುತ್ತದೆಯೇ ;

(d) 1950ನೆಯ ಇಸವಿ ಡಿಸೆಂಬರ್ 6ನೆಯ ತಾರೀಖಿನಿಂದ ಶ್ರೀಮತಿ ಪಿ. ಸುಬ್ಬಮ್ಮನವರು ತಮ್ಮ ಕೆಲಸದ ಮೇರೆ ಹಾಜರಾದ ತಾರೀಖಿನವರೆಗೂ ಚಿತ್ರದುರ್ಗ ಡಿಸ್ಟ್ರಿಕ್ಟ್ ಮೆಡಿಕರ್ ಆಫೀಸರವರಿಂದಲೂ ಮತ್ತು ಬೆಂಗಳೂರಿನಲ್ಲಿರುವ ಸೀನಿಯರ್ ಸರ್ಜನರಿಂದಲೂ ಸಾದರಾದ ಹುಕುಮುಗಳ ನಕಲುಗಳನ್ನು, ಚಿತ್ರದುರ್ಗ ಡಿಸ್ಟ್ರಿಕ್ಟ್ ಮೆಡಿಕರ್ ಆಫೀಸರು ಸೀನಿಯರ್ ಸರ್ಜನರವರಿಗೆ ಕಳುಹಿಸಿದ ವರದಿಗಳೊಡನೆ ಈ ಸಭೆಯ ಮುಂದೆ ಇಡಲಾಗುತ್ತದೆಯೇ ?

ಉತ್ತರ.—ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು (ರಾ ಮತ್ತು ಲೇಬರ್ ಸಚಿವರು) [on behalf of ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿಯವರು (ಪ್ರಧಾನ ಸಚಿವರು)].—

(a) ಹತ್ತು. ತಪಸೀಲುಗಳನ್ನು ಈ ಕೆಳಗೆ ನಮೂದಿನಲಾಗಿದೆ:—

(1) ಶ್ರೀಮತಿ ಅನುಸೂಯಮ್ಮನವರು.—ಡಿಸ್ಟ್ರಿಕ್ಟ್ ಆಸ್ಪತ್ರೆ, ಚಿತ್ರದುರ್ಗ—6 ತಿಂಗಳು. ಒಟ್ಟು ಸರ್ವಿಸ್—4 ವರ್ಷಗಳು ಮತ್ತು 7 ತಿಂಗಳು.

(2) ಶ್ರೀಮತಿ ವಿಮಲಮ್ಮನವರು.—ಹೆರಿಗೆ ಆಸ್ಪತ್ರೆ, ದಾವಣಗೆರೆ—6 ವರ್ಷಗಳು ಮತ್ತು 5 ತಿಂಗಳು. ಒಟ್ಟು ಸರ್ವಿಸ್—7 ವರ್ಷಗಳು.

(3) ಶ್ರೀಮತಿ ಕೆ. ಮರಿಯಮ್ಮನವರು.—ರಾಮಗಿರಿ—13 ತಿಂಗಳು. ಒಟ್ಟು ಸರ್ವಿಸ್—4 ವರ್ಷಗಳು ಮತ್ತು 5 ತಿಂಗಳು.

(4) ಶ್ರೀಮತಿ ಡಿ. ಪಾರ್ವತಮ್ಮನವರು.—ಧರ್ಮಾಪುರ—13 ತಿಂಗಳು. ಒಟ್ಟು ಸರ್ವಿಸ್ 3 ವರ್ಷಗಳು ಮತ್ತು 6 ತಿಂಗಳು.

(5) ಶ್ರೀಮತಿ ಗುರುಲಿಂಗಮ್ಮನವರು.—ಮಲ್ಲಪ್ಪನಹಳ್ಳ—4 ತಿಂಗಳು, ಒಟ್ಟು ಸರ್ವಿಸ್—3 ವರ್ಷಗಳು ಮತ್ತು 4 ತಿಂಗಳು.

(6) ಶ್ರೀಮತಿ ಡಿ. ರಾಮಕ್ಕನವರು.—ಹಿರೇಗುಂಟನೂರು—6 ತಿಂಗಳು. ಒಟ್ಟು ಸರ್ವಿಸ್—4 ವರ್ಷಗಳು ಮತ್ತು 5 ತಿಂಗಳು.

(7) ಶ್ರೀಮತಿ ಪಿ. ಕರಿಯಮ್ಮನವರು.—ಬಿದರಕೆರೆ—6 ತಿಂಗಳು. ಒಟ್ಟು ಸರ್ವಿಸ್—4 ವರ್ಷಗಳು ಮತ್ತು 8 ತಿಂಗಳು.

(8) ಶ್ರೀಮತಿ ಬಿ. ರಾಮಕ್ಕನವರು.—ಐಮಂಗಲ—3 ವರ್ಷಗಳು. ಒಟ್ಟು ಸರ್ವಿಸ್—3 ವರ್ಷಗಳು.